# ವಾರ್ತಾ ವಿಶ್ಲೇಷಣೆ

## ಧರ್ಮದ ಸತ್ಪರಿಣಾಮ

ಮಕ್ಕಳ ಬೆಳವಣಿಗೆಯ ಬಗ್ಗೆ ಮಹತ್ವಾಕಾಂಕ್ಷೆಯನ್ನು ತಾಳಿ ಅವರಿಗೆ ಎಲೆಕ್ಟ್ರಾನಿಕ್ ಆಟಿಗೆಗಳು, ಸುಜೂಕಿ ಪಿಯಾನೊ ತರಗತಿಗಳು, ತುಮುಲ ನಿಯಂತ್ರಣದ ಅಂತರ್ಮಿಲನ ಕೂಟಗಳು, ಬೆಳಗಿನ ಜಾವದ ಈಜು ತರಗತಿಗಳು ಇನ್ನೂ ಅತ್ಯಾಧುನಿಕ ಸೌಲಭ್ಯಗಳಿಗಾಗಿ ಅಪಾರವಾದ ಹಣ ತೆತ್ತು ಕೊಡಿಸುವ ಶಿಕ್ಷಣಕ್ಕಿಂತಲೂ ಸರಳವಾದ ರೀತಿಯಲ್ಲಿ ಮಗುವನ್ನು ಚರ್ಚಿನ, ದೇವಸ್ಥಾನದ ಅಥವಾ ಮಸೀದಿಯ ಧಾರ್ಮಿಕ ವಾತಾವರಣದಲ್ಲಿ ಅರಳಲು ಬಿಡುವುದರಿಂದ ಅದಕ್ಕಿಂತಲೂ ಪರಿಣಾಮಕಾರಿಯಾದ ಶಿಕ್ಷಣ ದೊರಕುವುದೇ ಅಲ್ಲದೆ ಹಣವೂ ಉಳಿತಾಯವಾಗುತ್ತದೆ ಎಂಬ ಒಂದು ವಿಚಿತ್ರವೆನಿಸುವ ವಿಚಾರಸರಣಿ ಅಮೇರಿಕದ ಕೆಲವು ಶಿಕ್ಷಣತಜ್ಞರಲ್ಲಿ ಮೂಡುತ್ತಿದೆ. ಅಮೇರಿಕದ ಡಾರ್ಟ್‌ಮೌತ್ ವೈದ್ಯಕೀಯ ಶಾಲೆಯಿಂದ ರಚಿತವಾದ ಸಮಿತಿ ನಡೆಸಿದ ವರ್ಷಾನುಗಟ್ಟಲೆಯ ಸಂಶೋಧನೆಗಳನ್ನು ಕಳೆದ ವರ್ಷ ಅಧ್ಯಯನ ಮಾಡಿ ಒಂದು ಕುತೂಹಲಕಾರಿ ವಿಷಯವನ್ನು ತಿಳಿಸುತ್ತದೆ. ಧಾರ್ಮಿಕ ವಾತಾವರಣದಲ್ಲಿ ಬೆಳೆದ ಮಗು, ವಿದ್ಯಾರ್ಥಿ, ಅತಿರೇಕದ ಭೌತಿಕ ಸೌಲಭ್ಯಗಳಿರುವ ಆದರೆ ಧರ್ಮ-ನೀತಿಬಾಹಿರವಾದ ವಾತಾವರಣದಲ್ಲಿ ಬೆಳೆದವರಿಗಿಂತಲೂ ಬದುಕಿನ ಬಗ್ಗೆ ಎಷ್ಟೋ ಸಕಾರಾತ್ಮಕ ಧೋರಣೆಯನ್ನು ಹೊಂದಿರುತ್ತದಂತೆ. ಆರೋಗ್ಯಕ್ಕೆ ಹಾನಿಕರವಾದ ಧೂಮಪಾನ, ಮದ್ಯಪಾನ ಮುಂತಾದ ಚಟಗಳಿಗೆ ಧಾರ್ಮಿಕ ವಾತಾವರಣದಲ್ಲಿ ಬೆಳೆದವರು ಬಲಿಯಾಗುವುದು ಕಡಮೆಯಷ್ಟೇ ಅಲ್ಲದೆ ಇವರು ಅಪರಾಧಗಳನ್ನೆಸಗುವ ಹಾಗೂ ಖಿನ್ನತೆಯಿಂದ ಬಾಧಿಸಲ್ಪಡುವ ಸಾಧ್ಯತೆಯೂ ಕಡಮೆ ಎಂದು ಈ ಸಂಶೋಧನೆ ತಿಳಿಸುತ್ತದೆ. ಧಾರ್ಮಿಕ ವಾತಾವರಣದಲ್ಲಿ ಬೆಳೆದ ಮಕ್ಕಳು ಮನೆ ಹಾಗೂ ಶಾಲೆಯೊಡನೆ ಒಂದು ಮಧುರವಾದ ಸಂಬಂಧವನ್ನು ಏರ್ಪಡಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿ, ಕುಟುಂಬದ ಎಲ್ಲರೊಡನೆ ಬೆರೆತು ಸಂತೃಪ್ತಿಯಿಂದ ಊಟಮಾಡುವವರಾಗಿರುತ್ತಾರೆ ಎಂಬುದನ್ನೂ ಈ ಅಧ್ಯಯನ ಬೆಳಕಿಗೆ ತಂದಿದೆ.

ಡಾರ್ಟ್‌ಮೌತ್ ಸಮಿತಿಯ ಸದಸ್ಯರಲ್ಲಿ ಒಬ್ಬರಾದ ವರ್ಜೀನಿಯಾ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರಜ್ಞ ಬ್ರಾಡ್ ವಿಲ್‌ಕಾಕ್ಸ್ (Brad Wilcox) ಎನ್ನುತ್ತಾರೆ : "ಜನಾಂಗ, ಪೋಷಕರ ಶಿಕ್ಷಣಮಟ್ಟ, ಕುಟುಂಬದ ಆದಾಯ ಇವುಗಳೆಲ್ಲವನ್ನೂ ಮೀರಿದ ತನ್ನದೇ ಆದ ಒಂದು ವಿಶಿಷ್ಟವಾದ ಸಕಾರಾತ್ಮಕ ಪರಿಣಾಮವನ್ನು ಧರ್ಮವು ಬೆಳೆಯುತ್ತಿರುವ ವಿದ್ಯಾರ್ಥಿಗಳ ಹಾಗೂ ಹದಿಹರೆಯದವರ ಮೇಲೆ ಮೂಡಿಸುತ್ತದೆ." ಧಾರ್ಮಿಕ ವಾತಾವರಣದಲ್ಲಿ ಬೆಳೆದ ಬಡ ಹುಡುಗರು ಅಂತಹ ವಾತಾವರಣದಿಂದ ವಂಚಿತರಾದವರಿಗಿಂತ, ಅನೇಕ ವೇಳೆ ಮಧ್ಯಮವರ್ಗ, ಶ್ರೀಮಂತವರ್ಗದಿಂದ ಬಂದವರಿಗಿಂತಲೂ ಉತ್ತಮ ಕೊಡುಗೆಯನ್ನು ಸಮಾಜಕ್ಕೆ ನೀಡಬಲ್ಲರು ಎಂದೂ ಸಹ ಅವರು ಹೇಳುತ್ತಾರೆ.

ಎಲ್ಲ ಆರೋಗ್ಯಕರವಾದ ಸಾಮಾಜಿಕ ಬೆಳವಣಿಗೆಗಳೂ ಗುಪ್ತಗಾಮಿಯಾಗಿ ಕ್ರಿಯಾಶೀಲವಾಗಿರುವ ಪ್ರಬಲವಾದ ಆಧ್ಯಾತ್ಮಿಕ ಶಕ್ತಿಗಳ ಅಭಿವ್ಯಕ್ತಿಯ ತುಣುಕಷ್ಟೇ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಹಿಂದಿನ ದಶಕಕ್ಕಿಂತಲೂ ಈ ದಶಕದಲ್ಲಿನ ತರುಣಪೀಳಿಗೆ ತಮ್ಮ ಬದುಕಿನಲ್ಲಿ ಧರ್ಮವು ಮಹತ್ವದ ಪಾತ್ರವನ್ನು ವಹಿಸಿದೆ ಎಂದು ಹೇಳುತ್ತಿರುವುದು ಅತ್ಯಂತ ಪ್ರಭಾವಶಾಲಿಯಾದ ಅಂತರ್ನಿಹಿತವಾದ ಧಾರ್ಮಿಕಶಕ್ತಿ ಸಮಾಜದಲ್ಲಿ ಕ್ರಿಯಾಶೀಲವಾಗಿರುವುದರ ದ್ಯೋತಕವಾಗಿರಬಹುದೆ?

## ಅಮೇರಿಕಕ್ಕೆ ಯುದ್ಧ ತಂದಿರುವ ಸಮಸ್ಯೆ

ಅಮೇರಿಕನ್ ಸೈನಿಕರು ಇರಾಕಿನ ಸೆರೆಮನೆಗಳಲ್ಲಿ ಇರಾಕ್ ಯೋಧರ ಮೇಲೆ ಎಸಗುತ್ತಿರುವ ದೌರ್ಜನ್ಯ, ಅಮಾನುಷವಾದ ಹಿಂಸಾವಿನೋದಗಳ ವಿವರಗಳು ವಿಶ್ವದ ದೈನಿಕ ಮತ್ತು ಇತರ ಪತ್ರಿಕೆಗಳಲ್ಲಿ ಸುದ್ದಿ ಮಾಡುತ್ತಿರುವ ಹಿನ್ನೆಲೆಯಲ್ಲಿ, ವಿಧಿಯ ವೈಪರೀತ್ಯವೋ ಎಂಬಂತೆ ಬಹಳಷ್ಟು ಅಮೇರಿಕನ್ ಯೋಧರು ಮನೋವಿಕೃತಿಗಳಿಂದ ಬಳಲುತ್ತಿರುವ ಸುದ್ದಿ ಚಿಂತಾಜನಕವಾಗಿದೆ. ಮುಂಬರುವ ದಿನಗಳು ಅಮೇರಿಕನರ ಪಾಲಿಗೆ ಅಷ್ಟೇನೂ ಸಂತಸಕರವಾಗಿರಲಾರವು ಎಂಬ ಭಯವೂ ಅಲ್ಲಿನ ಅನೇಕ ನಾಗರಿಕರನ್ನು ಕಾಡುತ್ತಿದೆ.

ಇತ್ತೀಚಿನ ವರದಿಯಂತೆ ಅಮೇರಿಕಕ್ಕೆ ಮರಳಿ ಬರುತ್ತಿರುವ ಆ ದೇಶದ ಯೋಧರ ಮನಃಸ್ಥಿತಿ ಶೋಚನೀಯವಾಗಿದೆಯೆಂದು ತಿಳಿದು ಬಂದಿದೆ. ೨೪ರ ಯುವಕ ಜೆರೆಮಿ ಸೀಲ್ ಮೃದುಸ್ವಭಾವದ ವ್ಯಕ್ತಿ ಎಂದೇ ಎಲ್ಲರಿಗೂ ಪರಿಚಿತ. ಅಮೇರಿಕದ ಸೈನ್ಯಕ್ಕೆ ಸೇರ್ಪಡೆಯಾಗಿ ಇರಾಕಿನ ಯುದ್ಧದಲ್ಲಿ ನೇಮಕಗೊಂಡಿದ್ದ. ಯುದ್ಧದಲ್ಲಿ ವಿಶೇಷ ತರಬೇತಿ ಪಡೆದು ತಜ್ಞನಾಗಿ ಬಹುಬೇಗ ಬಡ್ತಿಯನ್ನೂ ಪಡೆದ. ಅಮೇರಿಕಕ್ಕೆ ಹಿಂದಿರುಗಿದಾಗ ಬಹಳವಾಗಿ ಪ್ರೀತಿಸುತ್ತಿದ್ದ ತಾಯಿತಂದೆಯರನ್ನು ಭೇಟಿಯಾಗಲು ಹಿಂಜರಿದು ಸೀಲ್ ಹೋಟೆಲೊಂದರಲ್ಲಿ ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡ. ಅವನೇಕೆ ಆತ್ಮಹತ್ಯೆಯ ನಿರ್ಧಾರ ಕೈಗೊಂಡ ಎಂದು ಅವನ ಸ್ನೇಹಿತರು ಮನೆಯವರೆಲ್ಲ ಚಿಂತೆಗೀಡಾದರು. ಯುದ್ಧದ ಕ್ರೌರ್ಯ, ಅಮಾನವೀಯತೆಗಳ ಒತ್ತಡ ಅವನ ನೈತಿಕ ಪ್ರಜ್ಞೆಯನ್ನು ಚುಚ್ಚಿ ನೋಯಿಸಿದಂತೆ ಅವನು ಅಪರಾಧಿಪ್ರಜ್ಞೆಯನ್ನು ತಳೆದ. ತಂದೆತಾಯಿಗಳಿಗೆ ತನ್ನ ಈ ಅನೈತಿಕ ಯುದ್ಧದೊಂದಿಗಿನ ಸಂಬಂಧವನ್ನು ವಿವರಿಸಲಾಗದ ಪರಿಸ್ಥಿತಿ ಒದಗಿ ಬಂದು ಆತ್ಮಹತ್ಯೆ ಮಾಡಿಕೊಂಡ. ಮೂವತ್ತಾರು ವರ್ಷ ವಯಸ್ಸಿನ ಹೋವೆಲ್ ಯುದ್ಧದಿಂದ ಹಿಂತಿರುಗಿ ಬಂದು ತನ್ನ ಹೆಂಡತಿಗೆ ಬಂದೂಕಿನಿಂದ ಬೆದರಿಸುತ್ತ ತೋಟದಲ್ಲೆಲ್ಲ ಅಟ್ಟಿಸಿಕೊಂಡು ಸುತ್ತಿದ ಅನಂತರ ತನಗೇ ಗುಂಡಿಟ್ಟುಕೊಂಡು ಸತ್ತ.

ಅಮೇರಿಕದ ಜನರಲ್ ರಿಕಾರ್ಡೋ ಸ್ಯಾನ್ಚೆಜ್ ನಡೆಸಿದ ಸಮೀಕ್ಷೆಯ ಪ್ರಕಾರ ಸೈನಿಕರಲ್ಲಿ ಆತ್ಮಹತ್ಯೆಯ ಸಂಖ್ಯೆ ಹೆಚ್ಚುತ್ತಿದೆ. ಶೇಕಡಾ ೩೦ರಷ್ಟು ಸೈನಿಕರು ಸ್ಥೈರ್ಯ ಕಳೆದುಕೊಂಡು ಮಾನಸಿಕ ತೊಂದರೆಗಳಿಂದ ನರಳುತ್ತಿದ್ದಾರೆ. ಇದರ ಪರಿಣಾಮವಾಗಿ ಅಧಿಕಾರಿಗಳಿಗೆ ಅವರನ್ನು ನಿಯಂತ್ರಿಸುವುದೂ ಕಠಿಣವಾಗಿದ್ದು ಪರಸ್ಪರ ಗೌರವ ಇಲ್ಲವಾಗಿದೆ. ತಜ್ಞರ ವರದಿಯಂತೆ ಇದಕ್ಕೆಲ್ಲ ಮೂಲಕಾರಣ ಇರಾಕಿನ ವಿರುದ್ಧ ನಡೆಸುತ್ತಿರುವ ನಿರರ್ಥಕ ಯುದ್ಧ. ಹಗೆ, ಸೇಡು ಹಾಗೂ ಒಣಪ್ರತಿಷ್ಠೆಗಳು ನೈತಿಕ ಮೌಲ್ಯಗಳಿಗೆ ವಿರುದ್ಧವಾದ್ದರಿಂದ ಮಾನಸಿಕ ವಿಕೃತಿಗೆ ದಾರಿಯಾಗುತ್ತಿವೆ. ವಿ